**೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಹೊಸಕೋಟೆ**

**ಸಿ. ಸಿ. ನಂ.೪೮೮೯/೨೦೨೩**

ಪಿರ್ಯಾದುದಾರರು:- ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ದ

ಆರೋಪಿ:- ಎ೧. ಮುನಿವೆಂಕಟಮ್ಮಾ ಕೋಂ. ಚಿಕ್ಕಪ್ಪಯ್ಯಾ,
ವಯಸ್ಸುಃ ೫೨ ವರ್ಷ.

ಎ೨. ಶಶಿಕುಮಾರ್ ಬಿನ್ ಚಿಕ್ಕಪ್ಪಯ್ಯಾ,
ವಯಸ್ಸುಃ ೨೭ ವರ್ಷ.

ಎ೩. ಸತೀಶ್ ಬಿನ್ ಚಿಕ್ಕಪ್ಪಯ್ಯಾ,
ವಯಸ್ಸುಃ ೨೫ ವರ್ಷ.

ಎಲ್ಲರ ವಾಸಃ ಓಬಲಹಳ್ಳಿ ಗ್ರಾಮ,
ನಂದಗುಡಿ ಹೋಬಳಿ,
ಹೋಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಶ್ರೀಮತಿ. ಶಿಲ್ಪಶ್ರೀ ಎನ್. ಎಸ್ ೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ:೨೪.೦೩.೨೦೨೩ ರಂದು ರಾತ್ರಿ ೯-೦೦ ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಓಬಲಹಳ್ಳಿ ಗ್ರಾಮದಲ್ಲಿ ಚಾ.ಸಾ.೧ ವತ್ತು ಚಾ.ಸಾ.೨ ರವರು ಅವರ ಮನೆಯ ಬಳಿ ಇದ್ದಾಗ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಚಾ.ಸಾ.೧ ರವರ ಮನೆಯ ಬಳಿ ಬಂದು ಬೋರ್ ವೆಲ್ ವಿಚಾರದಲ್ಲಿ ಏಕಾಏಕಿ ಜಗಳ ತೆಗೆದು ೨ನೇ ಆರೋಪಿ ಚಾ.ಸಾ.೧ ರವರಿಗೆ ಕೈಗಳಿಂದ ಮುಖಕ್ಕೆ ಗುದ್ದಿದ್ದು ಹಾಗೂ ೩ನೇ ಆರೋಪಿ ಚಾ.ಸಾ.೧ ರವರಿಗೆ ಕೈಗಳಿಂದ ಬಲಗೈ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡುವುದರ

ಮೂಲಕ ಭಾರತೀಯ ದಂಡ ಸಂಹಿತೆ ಕಲಂ.೩೨೩ ಸಹ ಕಲಂ ೩೪ ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಲ್ಲಿ ೩ನೇ ಆರೋಪಿಯಾದ ನೀವು ಚಾ.ಸಾ.೨ ರವರಿಗೆ ದೊಣ್ಣೆಯಿಂದ ಎಡಗಾಲಿಗೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯಗಳನ್ನು ಮಾಡುವುದರ ಮೂಲಕ ಭಾ.ದಂ.ಸಂ ಕಲಂ.೩೨೪ ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ದೋಷಾರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, ಆರೋಪಿಗಳಲ್ಲಿ ೩ನೇ ಆರೋಪಿಯಾದ ನೀವು ಚಾ.ಸಾ. ೧ ಸೀರೆ ಹಿಡಿದು ಎಳೆದಾಡಿದ್ದು ಆ ಮೂಲಕ ನೀವು ಭಾ.ದಂ.ಸಂ. ಕಲಂ.೩೫೪[ಬಿ]ರ ಸಹವಾಚಕ ಕಲಂ.೩೪ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ ಅದೇ ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾ.ಸಾ.೧ ಮತ್ತು ೨ ರವರಿಗೆ ಬೋಳಿಮಕ್ಕಳ ನಿಮ್ಮಮ್ಮನ್ ಅವಾಚ್ಯ ಶಬ್ದಗಳಿಂದ ಬೈದು ಶಾಂತಿಭಂಗವನ್ನುಂಟು ಮಾಡುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.೫೦೪ ಸಹ ಕಲಂ.೩೪ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**

**೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಹೊಸಕೋಟೆ**

**ಸಿ. ಸಿ. ನಂ.4819/2023**

ಪಿರ್ಯಾದುದಾರರು:– ನಂದಗುಡಿ ಪೊಲೀಸ್ ಠಾಣೆ, ಹೊಸಕೋಟೆ

ವಿರುದ್ದ

ಆರೋಪಿ:– ಎ1. ಮುನಿವೆಂಕಟಮ್ಮಾ ಕೋಂ. ಚಿಕ್ಕಪ್ಪಯ್ಯಾ,
ವಯಸ್ಸುಃ 52 ವರ್ಷ.

ಎ2. ಶಶಿಕುಮಾರ್ ಬಿನ್ ಚಿಕ್ಕಪ್ಪಯ್ಯಾ,
ವಯಸ್ಸುಃ 27 ವರ್ಷ.

ಎ೩. ಸತೀಶ್ ಬಿನ್ ಚಿಕ್ಕಪ್ಪಯ್ಯಾ,
ವಯಸ್ಸುಃ 25 ವರ್ಷ.

ಎಲ್ಲರ ವಾಸಃ ಓಬಲಹಳ್ಳಿ ಗ್ರಾಮ,
ನಂದಗುಡಿ ಹೋಬಳಿ,
ಹೋಸಕೋಟೆ ತಾಲ್ಲೂಕು.

**ದೋಷಾರೋಪಣೆ**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ: 1ನೇ ಆರೋಪಿ
ಉತ್ತರ: 2ನೇ ಆರೋಪಿ
ಉತ್ತರ: 3ನೇ ಆರೋಪಿ

ಪ್ರಶ್ನೆ **2:** ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ? ಆರೋಪಿ

ಉತ್ತರ: **1**ನೇ ಆರೋಪಿ

ಉತ್ತರ: **2**ನೇ ಆರೋಪಿ

ಉತ್ತರ: **3**ನೇ ಆರೋಪಿ

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ:**10.06.2025** ರಂದು ದೃಢೀಕರಿಸಿದ್ದೇನೆ.

**೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ., ಹೊಸಕೋಟೆ.**